# ‘ನನ್ನ ಅಭಿನಯವನ್ನು ನೋಡುವಾಸೆ ಹೆಚ್ಚಿದೆ’



**ವರುಣ್ ಆರಾಧ್ಯ**
ಕಲರ್ಸ್ ಕನ್ನಡದ
ಬೃಂದಾವನ

◆ **ಆಕಾಶನಾಗುವ ಅವಕಾಶ ಸಿಕ್ಕಿದ್ದು ಹೇಗೆ?**

ನನ್ನದು ಮೂಲತಃ ಬೆಂಗಳೂರು. ಪಿಯು ಓದಿದ್ದೇನೆ. ಇದು ನನ್ನ ಮೊದಲ ಧಾರಾವಾಹಿ. ನಟನಾಗಬೇಕು ಎನ್ನುವ ಕನಸು ನನ್ನನ್ನು ಇಲ್ಲಿಗೆ ಕರೆ ತಂದಿದೆ. ಈ ಅವಕಾಶಕ್ಕಾಗಿ ನಿರಂತರವಾಗಿ ಆಡಿಷನ್ ನೀಡುತ್ತಲೇ ಬಂದಿದ್ದೇನೆ. ಓದಿನಲ್ಲಿ ನನಗೆ ಹೇಳುವಂತಹ ಆಸಕ್ತಿ ಇಲ್ಲ. ಕಲಾಕ್ಷೇತ್ರದಲ್ಲಿಯೇ ಜೀವನವನ್ನು ಕಟ್ಟಿಕೊಳ್ಳಬೇಕು ಎನ್ನುವ ಅದಮ್ಯ ಬಯಕೆ ನನ್ನದು. ಸಣ್ಣ ಅವಕಾಶದಿಂದಲೇ ದೊಡ್ಡಮಟ್ಟಕ್ಕೆ ಬೆಳೆಯುವ ನೀಲನಕ್ಷೆ ಮನಸಿನಲ್ಲಿದೆ. ಚಂದನವನದಲ್ಲಿ ಒಳ್ಳೆಯ ನಟ ಆಗಿ ಬೆಳೆಯುತ್ತೇನೆ ಎನ್ನುವ ವಿಶ್ವಾಸವೂ ನನ್ನಲ್ಲಿದೆ.

◆ **ಕಲ್ಯಾಣ ಮಹೋತ್ಸವ ಜೋರಾಗಿದೆ. ನಿಮಗೆ ಹೇಗನ್ನಿಸುತ್ತಿದೆ?**

ವಾಸ್ತವದಲ್ಲಿ ನನಗಿನ್ನೂ ಮದುವೆ ಆಗಿಲ್ಲ. ಸೀರಿಯಲ್ ಮದುವೆಯ ಸಂಪ್ರದಾಯ ಆಚರಣೆ ಎಲ್ಲ ಹೊಸತು. ಅದ್ದೂರಿಯಾಗಿ ಕಲ್ಯಾಣೋತ್ಸವ ನೆರವೇರಿಸಲು ಸಿದ್ಧತೆ ಆಗುತ್ತಿದೆ. ನಾನು ಇದರಲ್ಲಿ ವಿದೇಶದಲ್ಲಿ ಓದಿಬಂದಿದ್ದೇನೆ. ನನ್ನ ಅಜ್ಜಿಯ ಒತ್ತಾಸೆಗೆ ಮದುವೆಯಾಗುತ್ತಿದ್ದೇನೆ. ಓದುವುದು ಇನ್ನೂ ಇದೆ. ನಂತರ ಉದ್ಯೋಗದ ಬಗ್ಗೆ ಯೋಚನೆ ಮಾಡಬೇಕಿದೆ. ಮದುವೆಯ ವಾತಾವರಣ ವೈಯಕ್ತಿಕವಾಗಿ ನನಗೆ ಹಲವು ಪಾಠಗಳನ್ನು ಹೇಳುತ್ತಿದೆ. ಮುಂದೆ ನಿಜ ಜೀವನದಲ್ಲಿ ಮದುವೆ ಆಗುವ ಸಂದರ್ಭದಲ್ಲಿಯೂ ಸಹಕಾರಿ ಆಗುತ್ತದೆ ಎಂದುಕೊಂಡಿದ್ದೇನೆ.

◆ **ಮದುವೆ ನಂತರ ಮತ್ತೊಂದು ಪ್ರೀತಿ ಏನಾದರೂ ಆಗಬಹುದೇ?**

ಈಗಲೇ ಅದನ್ನೆಲ್ಲ ಊಹಿಸಲು ಸಾಧ್ಯವಿಲ್ಲ. ಈಗಷ್ಟೇ ‘ಬೃಂದಾವನ’ ಆರಂಭವಾಗಿದೆ. ಸಮಯ ಮತ್ತು ಸಂದರ್ಭ ಅದನ್ನೆಲ್ಲ ನಿರ್ಧರಿಸಬಹುದು. ಮುಂದೆ ಏನಾಗುತ್ತದೆ ಎನ್ನುವುದು ಗೊತ್ತಿಲ್ಲ. ಒಟ್ಟಾರೆ ಕುತೂಹಲದ ಕಥನವನ್ನು ಇದು ನಿರೂಪಿಸುತ್ತದೆ ಎಂದು ಮಾತ್ರ ನಿಖರವಾಗಿ ಹೇಳಬಲ್ಲೆ.

◆ **ಬಿಗ್ ಬಾಸ್‌ಗೆ ಹೋಗಲಿಲ್ಲವಲ್ಲ ಏಕೆ?**

ನನಗೆ ಆಹ್ವಾನ ಬಂದಿಲ್ಲ. ಹಾಗೆ ಒಂದು ವೇಳೆ ಬಂದಿದ್ದರೆ ಖಂಡಿತ ಹೋಗಿರುತ್ತಿದ್ದೆ ಎಂದು ಅನ್ನಿಸುತ್ತದೆ. ಮುಂದಿನ ದಿನಗಳಲ್ಲಿ ಅಂತಹ ಅವಕಾಶ ಬಂದರೂ ಬರಬಹುದು. ನಮ್ಮ ತಂದೆಗೆ ನನ್ನನ್ನು ‘ಬಿಗ್ ಬಾಸ್’ ಮನೆಯಲ್ಲಿ ನೋಡುವ ಆಸೆ ಇದೆ ಎಂದು ಒಮ್ಮೆ ಹೇಳಿದ್ದರು.

◆ **ಬಣ್ಣ ಹಚ್ಚಿದ ಮೊದಲ ದಿನ ಹೇಗಿತ್ತು?**

ಎಲ್ಲ ಹೊಸತು. ಅದಕ್ಕೋ ಏನೋ ಗಾಬರಿ, ಆತಂಕದಲ್ಲಿ ನನ್ನ ಕಣ್ಣು ಎಲ್ಲೆಡೆ ಹರಿದಾಡುತ್ತಿತ್ತು. ಕ್ಯಾಮೆರಾ ಕಣ್ಣು ನನ್ನ ಮೇಲೇ ಇದ್ದಿದ್ದರಿಂದ ಸಣ್ಣ ಭಯವೂ ಕಾಡುತ್ತಿತ್ತು. ದೊಡ್ಡ ಪ್ರಾಜೆಕ್ಟ್ ಆಗಿದ್ದರಿಂದ ಹಿಂಜರಿಕೆಯಲ್ಲೇ ಸಿದ್ಧನಾಗಿದ್ದೆ. ಆದರೆ, ಅದೆಲ್ಲವನ್ನು ನನ್ನ ಉತ್ಕಟ ಪ್ರೀತಿ ಹಿಂದಿಕ್ಕಿ ನಟಿಸಬೇಕು ಎನ್ನುವ ಉತ್ಸಾಹವನ್ನು ಹೆಚ್ಚಿಸಿತ್ತು. ಇನ್ನೂ ನನ್ನ ಅಭಿನಯ ಹೇಗೆ ಬರ್ತಾ ಇದೆ ಎಂದು ನೋಡಬೇಕು ಎನ್ನುವ ಆಸೆಗಣ್ಣಿನಿಂದ ಕಾಯುತ್ತಿದ್ದೇನೆ. ಇದುವರೆಗೆ ಬೇರೆಯವರ ನಟನೆಯನ್ನು ನೋಡಿ ಕಣ್ಣು ತುಂಬಿಕೊಳ್ಳುತ್ತಿದ್ದೆ.

ಈ ಧಾರಾವಾಹಿ ಹಲವು ಕಾರಣಗಳಿಗೆ ಇಷ್ಟ ಆಗುತ್ತದೆ. ಪುಟ್ಟ ಪುಟ್ಟ ಕುಟುಂಬಗಳನ್ನು ನೋಡುತ್ತಿರುವ ನಮಗೆ ಒಂದು ದೊಡ್ಡ ಅವಿಭಕ್ತ ಕುಟುಂಬ ಮಾದರಿಯಂತಿದೆ. ಇಲ್ಲಿ ಬಂಧುಗಳನ್ನು ಕನ್ನಡ ಕರುಳುಬಳ್ಳಿಯ ಸಂಬಂಧದಲ್ಲಿಯೇ ಕರೆಯುತ್ತೇವೆ. ಕಥೆಯ ನಾಯಕನಾದ ನಾನು ಎಲ್ಲ ಪಾತ್ರಗಳ ಜೊತೆ ವ್ಯವಹರಿಸಬೇಕಾಗುತ್ತದೆ. ಸೆಟ್‌ನಲ್ಲಿಯೂ ಎಲ್ಲರ ಜೊತೆ ಬೆರೆಯುತ್ತಿದ್ದೇನೆ.

◆ **ಬೇರೆ ಇನ್ನೇನು ಮಾಡ್ತೀರಿ?**

ಸಾಮಾಜಿಕ ಮಾಧ್ಯಮಗಳಲ್ಲಿ ಸೃಜನಶೀಲ ಸಾಧ್ಯತೆಗಳನ್ನು ಆವಿಷ್ಕರಿಸುತ್ತೇನೆ. ಇನ್‌ಫ್ಲುಯೆನ್ಸರ್ ಆಗಿ ಡಿಜಿಟಲ್ ಮಾಧ್ಯಮದಲ್ಲಿ ತೊಡಗಿಸಿಕೊಂಡಿದ್ದೇನೆ. ಯೂಟ್ಯೂಬ್, ಇನ್‌ಸ್ಟಾಗ್ರಾಮ್‌ಗಳಲ್ಲಿ ಅದನ್ನು ಪ್ರಕಟಿಸುತ್ತೇನೆ. ನಿರ್ದಿಷ್ಟವಾಗಿ ಏಕರೂಪದ ವಿಷಯ ಮತ್ತು ವಸ್ತುವಿಗೆ ನಾನು ಅಂಟಿಕೊಂಡಿಲ್ಲ. ಡಾನ್ಸ್–ಹಾಸ್ಯ ಸೇರಿದಂತೆ ಭಿನ್ನ ಭಿನ್ನ ಮಾದರಿಗಳನ್ನು ಹಾಕುತ್ತೇನೆ. ಅದರಲ್ಲಿ ಲಕ್ಷಾಂತರ ಮಂದಿ ವೀಕ್ಷಕರು ನನಗೆ ಸಿಕ್ಕಿದ್ದಾರೆ ಎನ್ನುವುದು ಖುಷಿಯ ವಿಷಯ.

■ **ರಾಘವೇಂದ್ರ ಕೆ.**